ಇ)

ನಿವೇಶನ	ಆಯವ್ಯಯ	ಬಿಡುಗಡೆ
	(ಲಕ್ಷ ರೂ. ಗಳಲ್ಲಿ)	
1997-98 (ಗ್ರಾ)	1482.00	1111.50
(ನಗರ)	480.00	360.03
1998-99 (ಗ್ರಾ)	1482.00	891.00
(ನಗರ)	453.00	326.50
1999-2000 (ಗ್ರಾ)	741.00	285.22
(ನಗರ)	459.21	164.80

ಈ) ಆಶ್ರಯ ಸಮಿತಿಗಳು.

ಉ) ಹೌದು.

ಊ) ಅಂತಹ ಪ್ರಕರಣಗಳಲ್ಲಿ ರದ್ದುಗೊಳಿಸಿ ಅರ್ಹರಿಗೆ ನೀಡಲು ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ತಾಳೆ ಬೆಳೆ ಅಭಿವೃದ್ಧಿ

476 - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. *ರಾಜ್ಯದಲ್ಲಿ ತಾಳೆಎಣ್ಣೆ ಯೋಜನೆ ಎಂದು ಜಾರಿಗೆ ಬಂದಿದೆ?*

ಆ. *ಈ ಯೋಜನೆಗೆ ಇಲ್ಲಿಯವರೆಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು ?*

ಇ. *ತಾಳೆಬೆಳೆ ಯೋಜನೆಗಳನ್ನು ಜಾರಿಗೊಳಿಸಲು ಯಾವ ಯಾವ ಖಾಸಗಿ ಸಂಸ್ಥೆಗಳಿಗೆ ಮನ್ನಣೆ ಕೊಡಲಾಗಿದೆ. ಹಾಗೂ ಆ ಸಂಸ್ಥೆಗಳಿಗೆ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಮೊತ್ತವೆಷ್ಟು?*

ಈ) *ರಾಜ್ಯದಲ್ಲಿ ಇಲ್ಲಿಯವರೆಗೆ ತಾಳೆಗಿಡ ಬೆಳೆಸಿದ ಕ್ಷೇತ್ರವೆಷ್ಟು?*

ಉ) *ರಾಜ್ಯದಲ್ಲಿ ಎಲ್ಲೆಲ್ಲಿ ತಾಳೆಎಣ್ಣೆ ಉತ್ಪಾದಿಸುವ ಘಟಕಗಳನ್ನು ಸ್ಥಾಪಿಸಲಾಗಿದೆ ಹಾಗೂ ಇಲ್ಲಿಯವರೆಗೆ ಉತ್ಪಾದಿಸಿದ ಎಣ್ಣೆ ಪ್ರಮಾಣ ಎಷ್ಟು?*

ಊ) *ರಾಜ್ಯದಲ್ಲಿ ತಾಳೆಗಿಡಗಳನ್ನು ಕಿತ್ತುಹಾಕುತ್ತಿರುವುದು ಬೆಳೆದ ಎಣ್ಣೆ ಕಾಳುಗಳು ಖರೀದಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಸರ್ಕಾರ ಈ ಬಗ್ಗೆ ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು?*

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ. 1990-91ರಲ್ಲಿ ಪ್ರಾರಂಭಿಸಲಾಯಿತು.

ಆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಅನುಕ್ರಮವಾಗಿ ರೂ. 2001.805 ಲಕ್ಷ, ರೂ. 848.473 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. (ಪ್ರಾರಂಭದಿಂದ ಇಲ್ಲಿಯವರೆಗೆ)

ಇ. ಒಟ್ಟು 4 ಖಾಸಗಿ ಸಂಸ್ಥೆಗಳಿಗೆ ಮನ್ನಣೆ ಕೊಡಲಾಗಿದೆ. ಅವುಗಳಿಂದರೆ :

1. ಮೆ : ಕರ್ನಾಟಕ ಓಸ್ವಾಲ್ ಆಯಿಲ್ ಪಾಮ್ಸ್ ಲಿ.
2. ಮೆ : ಪಾಮ್‌ಟೆಕ್ ಇಂಡಿಯಾ ಸಂಸ್ಥೆ
3. ಮೆ : ಸಿಂಹಪುರಿ ಅಗ್ರಿಟೆಕ್ ಪ್ರೈವೇಟ್ ಸಂಸ್ಥೆ.
4. ಮೆ : ಫುಡ್ಸ್, ಫ್ಯಾಟ್ಸ್ ಮತ್ತು ಫರ್ಟಿಲೈಸರ್ಸ್ ಸಂಸ್ಥೆ

ಈ ನಾಲ್ಕೂ ಸಂಸ್ಥೆಗಳಿಗೆ ಇದುವರೆಗೆ ಬಿಡುಗಡೆ ಮಾಡಿದ ಒಟ್ಟು ಸಹಾಯಧನ ಮೊತ್ತ ರೂ. 5,30,92,857-00.

ಈ. 8,382 ಹೆಕ್ಟೇರ್‌ಗಳು

ಉ. ರಾಜ್ಯದಲ್ಲಿ ಎರಡು ತಾಳೆಎಣ್ಣೆ ಉತ್ಪಾದಿಸುವ ಘಟಕಗಳನ್ನು ಸ್ಥಾಪಿಸಲಾಗಿದೆ.

1. ಕೂಲ್ ಸಂಸ್ಥೆಯಿಂದ ಸ್ಥಾಪಿತವಾದ ಘಟಕ ಕಾರೇಹಳ್ಳಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆಯಲ್ಲಿದೆ.
2. ಕಬಿನಿಯಲ್ಲಿ ಎಫ್‌ಎಒ. ಸಹಾಯದಿಂದ ಸ್ಥಾಪಿತವಾದ ಘಟಕ ಜನವರಿ 2000 ರ ವರೆಗೆ ಉತ್ಪಾದನೆಯಾದ ತಾಳೆಎಣ್ಣೆ ಪ್ರಮಾಣ 2860.227 ಮೆಟ್ರಿಕ್ ಟನ್‌ಗಳು ಬಂದಿದೆ.

ಊ. ಪರಿಸ್ಥಿತಿ ಸುಧಾರಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಈ ಅನೇಕ ಸಭೆಗಳು ನಡೆದಿದೆ. ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಕೇಂದ್ರ ಸರ್ಕಾರಕ್ಕೆ ತಾಳೆಹಣ್ಣುಗಳ ಖರೀದಿಗಾಗಿ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯ ಪ್ರಸ್ತಾವನೆಯನ್ನು ಸಲ್ಲಿಸಲಾದ್ದು, ಸಧ್ಯದಲ್ಲಿ ಇದಕ್ಕೆ ಮಂಜೂರಾತಿ ನಿರೀಕ್ಷಿಸಲಾಗಿದೆ. ಇದರಿಂದ ರೈತರಿಗೆ ಅನುಕೂಲವಾಗುತ್ತದೆ.
2. ತಾಳೆಬೆಳೆ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಎಣ್ಣೆ ತಾಳೆ ಮಸೂದೆಯನ್ನು ಸಿದ್ದಪಡಿಸಿದೆ. ಈ ಎಣ್ಣೆ ತಾಳೆ ಮಸೂದೆಗೆ ಸಚಿವ ಸಂಪುಟ ಅನುಮೋದನೆ ನೀಡಿರುತ್ತದೆ ಹಾಗೂ ವಿಧಾನ ಮಂಡಲಗಳ ಅಧಿವೇಶನದಲ್ಲಿ ತರಲು ಅನುಮೋದಿಸಿದೆ.
3. ಖಾದ್ಯತೈಲಗಳ ಆಮದು ಸುಂಕ ಶೇ. 65 ರಿಂದ ಶೇ.15 ಕ್ಕೆ ಇಳಿದಿದ್ದು, ತಾಳೆಎಣ್ಣೆ ದರ ಇಳಿಕೆಯನ್ನು ಏರಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಾಗಿತ್ತು. ಈಗ ಶುದ್ಧೀಕರಿಸಿದ ಎಣ್ಣೆಗೆ ಶೇ. 25 ಕ್ಕೆ ಏರಿಸಲಾಗಿದೆ.